# 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS-233 /2003** **DW-1**

**ದಿಃ 20.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ 2 ನೇ ಪ್ರತಿವಾದಿ ಪರ ಶ್ರೀ ಸಿ ಸಿ ಆರ್ ವಕೀಲರಿಂದಃ**

ನಾಲ್ಕು ಪೋಟೋಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಡಿ 1 ರಿಂದ 4 ಎಂದು, ಅಡಕ ಮುದ್ರಕವನ್ನು ನಿಡಿ 5 ಎಂದು, ರಶೀದಿಯನ್ನು ನಿಡಿ 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಎಸ್ ಬಿ ವಕೀಲರಿಂದ ಃ**

ನಾನು ಹಾಜರುಪಡಿಸಿರುವ ಪೋಟೋಗಳು ದಾವಾ ಆಸ್ತಿಗೆ ಸಂಬಂದಿಸಿದ ಪೋಟೋಗಳಾಗಿರುತ್ತವೆ. ತಾವು ಪ್ರತಿವಾದಿಯರಿಗೆ ಈಗಾಗಲೇ ಖರೀದಿ ಪತ್ರವನ್ನು ಮಾಡಿಕೊಟ್ಟಿದ್ದು ಅದರಂತೆ ಪ್ರತಿವಾದಿ ನಂಃ 10 ರಿಂದ 13 ರವರು ಕಬಜಾದಲ್ಲಿರುತ್ತಾರೆಂದರೆ ಸಾಕ್ಷಿಯು ನಾನೇ ಇರುತ್ತೇನೆಂದು ನುಡಿಯುತ್ತಾರೆ. ತಾವು ಅವರಿಗೆ ಖರೀದಿ ಪತ್ರವನ್ನು ಮಾಡಿಕೊಟ್ಟಿಲ್ಲ ಎಂದು ಹೇಳಿ ಏನಾದರೂ ದಾವೆಯನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ಯಾವದೇ ದಾವೆ ಹಾಕಿಲ್ಲ ಮತ್ತು ಖರೀದಿ ಪತ್ರ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ತಾವು ವಾದಿಯರಿಗೆ ದಾವಾ ಆಸ್ತಿಯನ್ನು ಕೊಡುತ್ತೇವೆಂದು ಒಪ್ಪಿ ಪ್ರತಿವಾದಿ ನಂಃ 10 ರಿಂದ 13 ರವರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಯಾರಿಗೂ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ತಾವು ಹಾಜರುಪಡಿಸಿರುವ ಪೋಟೋಗಳು ದಾವಾ ಆಸ್ತಿಗೆ ಸಂಬಂದಿಸಿದ್ದಲ್ಲ, ದಾವಾ ಆಸ್ತಿಯಲ್ಲಿ ಪ್ರತಿವಾದಿ ನಂಃ 10 ರಿಂದ 13 ರವರು ಪ್ಲಾಟುಗಳನ್ನು ಮಾಡಿರುತ್ತಾರೆಂದರೆ ಸರಿಯಲ್ಲ. ತಾವು ಯಾವದೇ ಹಣವನ್ನು ವಾದಿಯರಿಗೆ ಕೊಟ್ಟಿಲ್ಲ ಮತ್ತು ಖರೀದಿ ಪತ್ರವನ್ನು ಮಾಡಿಕೊಡಲು ತಪ್ಪಿಸಿಕೊಂಡಿರುತ್ತೀರಿ ಎಂದರೆ ಸ ಾಕ್ಷಿಯು ಯಾವದೇ ಹಣವನ್ನು ಪಡೆದಿಲ್ಲ ಮತು ಕರಾರು ಪತ್ರವನ್ನು ಸಹ ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ 10 ರಿಂದ 13 ನೇಯವರು ಹಾಗೂ ತಾವು ಸೇರಿಕೊಂಡು ವಾದಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಎಲ್ಲ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿಸ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು : 13 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ಖರ್ಚು ಸಮೇತ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**